ಶ್ರೀ ಎಸ್. ಆರ್. ಕಂಠಿ.—ಅವರ ಸರ್ವಿಸನ್ನು ನೋಡಿಕೊಂಡು ಸರ್ಕಾರದವರು ರೂಲ್ಸ್ ಪ್ರಕಾರ ಮಾಡುತ್ತಾರೆ.

ಶ್ರೀ ಬಿ. ಎಲ್. ಗೌಡ.—ಈಗ ಅವರು ಯಾರನ್ನು ಕೆಲಸದಿಂದ ತೆಗೆದುಹಾಕಿದ್ದಾರೋ ಅವರು ಐ. ಪಿ. ಸಿ. 302ರ ಪ್ರಕಾರ ಒಂದುವರ್ಷ ಸಜಾ ಮತ್ತು ಜುಬ್ಯಾನೆಗಳನ್ನು ತೆತ್ತಿರತಕ್ಕವರಾಗಿದ್ದಾರೆಂಬ ವಿಚಾರ ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಎಸ್. ಆರ್. ಕಂಠಿ.—ಈಗ ಕೆಲಸದಿಂದ ಯಾರನ್ನು ತೆಗೆದುಹಾಕಲಾಗಿದೆಯೋ ಅವರು 2-2-45ರಲ್ಲಿ ಕೆಲಸಕ್ಕೆ ಸೇರಿದರು. ಅವರಿಗೆ 1946ರಲ್ಲಿ ಕೆಲಸ ಖಾಯಂ ಆಯಿತು. ಮತ್ತೆ 1956ರಲ್ಲಿ ಅವರಿಗೆ ಡಿಮೋಟ್ ಆಗಿ ಮತ್ತೆ ಅದೇವರ್ಷ ಕೆಲಸದಿಂದ ಟರ್ಮಿನೇಟ್ ಆಗಿದೆ.

Sri S. SIVAPPA.—Since the whole matter is before the Court and *sub judice* why not Government give the grant till the whole question is decided by the court?

ಶ್ರೀ ಎಸ್. ಆರ್. ಕಂಠಿ.—ಅವರೀಗ ಸಿ. ಪಿ. ಸಿ. 85ಪ್ರಕಾರ ನೋಟೀಸ್ ಕೊಟ್ಟಿದ್ದಾರೆ. It is not *sub judice*.

Paddy hullers working in Channapatna Town and Taluk.

*Q.—75. Sri B. J. LINGE GOWDA (Channapatna).—

Will the Government be pleased to state :—

(*a*) the number of paddy hullers actually working in Channapatna Town and Taluk and how many of them are licensed.

(*b*) what action has been taken by Government against the owners of hullers commissioned without licences?

A.—Sri M. V. KRISHNAPPA (Minister for Revenue).—

	Channapatna	
(*a*)	*Town*	*Taluk*
(i) Number of paddy huller actually working.	12	30
(ii) Number. of paddy hullers licensed.	2	10

(*b*) Action is being taken under Section 13 of the Rice Milling Industry (Regulation) Act, 1858 against the concerned persons for contravention of the Act and Rules made thereunder.

ಶ್ರೀ ಬಿ. ಜೆ. ಲಿಂಗೇಗೌಡ.— ಈ ತಾಲ್ಲೂಕಿನಲ್ಲಿ ಒಟ್ಟು 42 ಗಿರಣಿಗಳು ಕೆಲಸಮಾಡುತ್ತಿವೆ. ಆ ಪೈಕಿ 12ಕ್ಕೆ ಮಾತ್ರ ಲೈಸೆನ್ಸ್ ಕೊಟ್ಟು ಇನ್ನುಳಿದವುಗಳಿಗೆ ಏಕೆ ಲೈಸೆನ್ಸ್ ಕೊಡಲಿಲ್ಲ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಪೈಕಿ 15 ಜನರ ವಿಚಾರ ಕರೆಸ್‌ಪಾಂಡೆನ್ಸಿನಲ್ಲಿದೆ. ಇನ್ನುಳಿದವರ ಬಗ್ಗೆ ಸೂಕ್ತಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ. ಜೆ. ಲಿಂಗೇಗೌಡ.—ಸರ್ಕಾರದವರು ಇತ್ತೀಚೆಗೆ ಪ್ರಾರಂಭಮಾಡಿರತಕ್ಕವರಿಗೆ ಲೈಸೆನ್ಸ್ ಕೊಟ್ಟಿರತಕ್ಕ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೊದಲು ಇವುಗಳಿಗೆ ಲೈಸೆನ್ಸ್ ಪಡೆಯಬೇಕಾಗಿರಲಿಲ್ಲ. ಇತ್ತೀಚೆಗೆ ಇಂಡಿಯಾಸರ್ಕಾರದವರ ಆಜ್ಞೆಯಪ್ರಕಾರ ಈ ಗಿರಣಿಗಳು ಲೈಸೆನ್ಸ್‌ನ್ನು ಪಡೆಯಬೇಕಾಗಿದೆ. ಈಗ ಪ್ರಾರಂಭಮಾಡಿರತಕ್ಕವರಿಗೂ ಕೆಲವನ್ನು ಕೂಡಲೆ ನಿಲ್ಲಿಸಬೇಕೆಂದು ಹೇಳಿವ್ದೇವೆ. ಅವರು ಹಾಗೆ ನಿಲ್ಲಿಸದಿದ್ದರೆ ಅವರಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಜೆ. ಲಿಂಗೇಗೌಡ.—1963ರಲ್ಲಿ ಪ್ರಾರಂಭಮಾಡಿರತಕ್ಕವರಿಗೆ ಲೈಸೆನ್ಸ್ ಕೊಟ್ಟಿಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರಮೇಲೆ ಕೇಸನ್ನು ಬುಕ್ ಮಾಡಿದ್ದಾರೆ.

ಕರ್ನಾ. ಬಿಳ ವಿಧಾನ ಪರಿಷತ್ತಿಗಾರ
(ಭಾಷಾ ಗ್ರಂಥಾಲಯ) 4808
ಪ್ರಾಪ್ತಿ ಕ್ರಮಾಂಕ Accession No. (B) 21....
ದಿನಾಂಕ Date.....

Sri V. S. PATIL.—May I know this Rice-milling Industries Regulation has been brought into force at all because it must be everybody's concern? Why do the Government restrict it to rice-milling industry?

Sri M. V. KRISHNAPPA.—This Act has been passed by the Government of India. There was a committee appointed by the Centre to encourage hand-pounding industry.

Mr. SPEAKER.—Vitamins are better preserved by handpounding.

Sri M. V. KRISHNAPPA.—That was the main reason to protect the nutritive food that is being wasted in the polishing of the rice in the mills. The Government wanted to have control over them and that is why the Act was brought into force.

Metalling of Road leading to Dadinayakana Doddi Jathre in Malur Taluk.

*Q.—31. Sri S. V. RAME GOWDA (Malur).—

Will the Government be pleased to state :—

(*a*) whether they are aware that 3 buses are plying on the ten mile road leading to Dadinayakana Doddi Jathre in Malur Taluk.

(*b*) if so, whether they would take over the above road to the Public Works Department and metal the same?

*A.—Sri R. M. PATIL, (Minister for Home).—

(*a*) Yes.

(*b*) This will be considered.

ಶ್ರೀ ಎಸ್. ವಿ. ರಾಮೇಗೌಡ.—ವಿಷಯ ಪರ್ಯಾಲೋಚನೆಯಲ್ಲದೆ ಎಂದು ಹೇಳಿದ್ದೀರಿ. ಹೇಗೆ ಎಷ್ಟು ದಿವಸಗಳ ಪರ್ಯಾಲೋಚನೆಯಲ್ಲಿದೆ? ಇದನ್ನು ಯಾವಾಗ ಹಾಕಿಸಿ ಕೊಡುತ್ತೀರಿ?

ಶ್ರೀ ಎಂ. ಆರ್. ಪಾಟೀಲ್.—ಇದನ್ನು ಸ್ಪೇಟ್‌ಫಂಡ್ ರಸ್ತೆಮಾಡಬೇಕೆಂದು ವಿಚಾರವಿದೆ. ಅದಕ್ಕೆ ಅವಶ್ಯಕವಾದ ಹಣ ಯಾವಾಗ ಅವೇಲಬಲ್ ಆಗುತ್ತದೆಯೋ ಆಗ ಮಾಡುತ್ತಾರೆ.

Mariamma Temples that are functioning under the H. R. and C. Endowments in Kaup Town of South Kanara District.

*Q.—74. Sri B. BHASKAR SHETTY (Kaup).—

Will the Government be pleased to state :—

(*a*) the number of Mariamma temples that are functioning under the Hindu Religious and Charitable Endowments in Kaup Town of South Kanara District ;

(*b*) the total amount of income of each Mariamma temples for the last three years ;